ಕ್ರಿಮಿನಲ್.ಎಂ.ಸಿ ನಂ.- **52/2021**

ಪಿ.ಡಬ್ಲ್ಯೂ.- **1**

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಹೊಸಪೇಟೆ.
ಸಾಕ್ಷಿಯನ್ನು ದಿನಾಂಕ **20-10-2023** ರಂದು ಪ್ರಾಮಾಣೀಕರಿಸಲಾಯಿತು.

| | |
|---|---|
| ಸಾಕ್ಷಿ ಹೆಸರು - | ಆಯಶಬಾನು |
| ಗಂಡನ ಹೆಸರು - | ಬಿ. ಖಾದರ್ ಬಾಷ |
| ವಯಸ್ಸು - | **32** ವರ್ಷಗಳು |
| ಉದ್ಯೋಗ - | ಗೃಹಿಣಿ |
| ವಾಸಸ್ಥಳ - | ಹೊಸಪೇಟೆ |

ಮುಖ್ಯ ವಿಚಾರಣೆ- ಅರ್ಜಿದಾರರ ಪರ ಶ್ರೀ ಕೆ.ವೈ ವಕೀಲರಿಂದ-

ನನ್ನ ವಿವಾಹ ದಿಃ **07-12-2017** ರಂದು ಉಮರ್ ಫಂಷನ್ ಹಾಲ್ ನಲ್ಲಿ ಎದುರುದಾರರ ಜೊತೆಯಲ್ಲಿ ಹಿರಿಯ ಮುಂದೆ ಆಗಿರುತ್ತದೆ. ಆ ಸಮಯದಲ್ಲಿ ರೂ. **1,10,000/-** ನಗದು ಹಣ, ಒಂದು ಅರ್ಧ ತೊಲೆಯ ಬಂಗಾರದ ಉಂಗುರ, ಒಂದು ಬಂಗಾರದ ಚೈನ್ ಮತ್ತು ಬಟ್ಟೆ ಕೊಡುವುದಾಗಿ ಮಾತುಕತೆ ಆಗಿರುತ್ತದೆ. ಅದೇ ರೀತಿ ನನಗೆ **5** ತೊಲೆ ಬಂಗಾರ ಮತ್ತು ರೂ. **1,10,000/-** ಬೆಲೆಬಾಳುವ ಜೀವನ ಅವಶ್ಯಕ ವಸ್ತುಗಳನ್ನು ಕೊಡುವುದಾಗಿ ಮಾತುಕತೆ ಆಗಿರುತ್ತದೆ. ನನ್ನ ಅತ್ತೆ ಮನೆಯ ಕುಟುಂಬ ಜಂಟಿ ಕುಟುಂಬ ಆಗಿತ್ತು. ನನ್ನ ನಾದಿನಿಯಾದ ರೇಷ್ಮರವರ ವಿವಾಹ ಆಗಿದ್ದರು ಸಹ ತನ್ನ ಗಂಡನ ಮನೆಯಿಂದ ನಮ್ಮ ಮನೆಗೆ ಹೋಗುವುದು, ಬರುವುದು ಮಾಡುತ್ತಿದ್ದರು. ಆಕೆಗೆ ನನ್ನ ಗಂಡ ರೂ. **10,000/-** ಗಳನ್ನು ಸಂಬಳವಾಗಿ ಕೊಡುತ್ತಿದ್ದರು. ನಂತರ ನನಗೆ ಆಕೆಯು ತನ್ನ ಗಂಡನ ಮನೆಯಲ್ಲಿ ನಾನು ಕೆಲಸಕ್ಕೆ ಹೋಗುತ್ತಿದ್ದೇನೆಂದು ಸುಳ್ಳು ಹೇಳಿ ನಮ್ಮ ಮನೆಗೆ ಬರುತ್ತಿದ್ದ ಕಾರಣ ನನ್ನ ಗಂಡ ರೂ. **10** ಸಾವಿರಗಳನ್ನು ಪ್ರತೀ ತಿಂಗಳು ಆಕೆಗೆ ಕೊಡುತ್ತಿದ್ದರೆಂದು ಗೊತ್ತಾಗಿರುತ್ತದೆ. ಅದೇ ರೀತಿ ಆಕೆಯ ಗಂಡನ ಮನೆಯವರಿಗೂ ಸಹ ಈ ವಿಚಾರ ಗೊತ್ತಿರುವುದಾಗಿ ನನಗೆ ಗೊತ್ತಾಗಿರುತ್ತದೆ. ನನ್ನ ನಾದಿನಿಯ ಗಂಡನ ಮನೆಯವರು ದುಡ್ಡು ಬರುತ್ತದೆ ಎಂದು ಸುಮ್ಮನೆ ಇದ್ದರು.

ನನ್ನ ನಾದಿನಿ ಪ್ರತೀ ದಿನ ನಮ್ಮ ಮನೆಗೆ ಬರುತ್ತಿರುವುದರಿಂದ ನನ್ನನ್ನು ಸತಾಯಿಸುವುದು, ಅಳಿಸುವುದು, ನನ್ನ ಬಗ್ಗೆ ಇಲ್ಲ-ಸಲ್ಲದ್ದನ್ನು ನನ್ನ ಗಂಡನ ಬಳಿ ಹೇಳುವುದು ಮಾಡುತ್ತಿದ್ದಳು. ಆಕೆಯ ಮಾತು ಕೇಳಿ ನನ್ನ ಅತ್ತೆ ಮತ್ತು ಮೈದುನ ಸಹ ನನಗೆ ಬೈಯುತ್ತಿದ್ದರು.

ನನ್ನ ತಂದೆಯ ಮನೆ ನನ್ನ ಗಂಡನ ಮನೆಯ ಪಕ್ಕದಲ್ಲಿ ಇದೆ. ನನಗೆ ಮೊದಲನೇಯದಾಗಿ ಹೆಣ್ಣುಮಗು ಜನಿಸಿರುತ್ತದೆ. ನನ್ನ ಮಗಳು ಜನಿಸಿದ ನಂತರ 3 ತಿಂಗಳವರೆಗೆ ನನ್ನ ಗಂಡನ ಮನೆಯವರು ಪಕ್ಕದಲ್ಲಿಯೇ ಅವರ ಮನೆ ಇದ್ದರು ಸಹ ನನ್ನ ತಂದೆಯ ಮನೆಗೆ ನಮ್ಮನ್ನು ನೋಡಲು ಬಂದಿರುವುದಿಲ್ಲ. ನಾನು ಕರೆ ಮಾಡಿದರೆ ಅವರು ಸ್ವೀಕರಿಸಿರುವುದಿಲ್ಲ. 3 ತಿಂಗಳ ನಂತರ ನಾಮಕರಣ ಕಾರ್ಯಕ್ರಮವನ್ನು ಭರ್ಜರಿಯಾಗಿ ಮಾಡಿದರೆ ಮಾತ್ರ ನಾವು ಬರುತ್ತೇವೆಂದು ನಮ್ಮ ಗಂಡನ ಮನೆಯವರು ನಮಗೆ ತಿಳಿಸಿರುತ್ತಾರೆ. ನನ್ನ ಮಗಳು 5 ತಿಂಗಳ ಆದ ನಂತರ ನಾನು ನನ್ನ ಗಂಡನ ಮನೆಗೆ ಮರಳಿ ಹೋಗಿರುತ್ತೇನೆ.

ನನಗೆ ಹೆಣ್ಣು ಮಗು ಜನಿಸಿದ್ದರಿಂದ ಕೀಳಾಗಿ ನೋಡುವುದು ಮತ್ತು ಮಾತನಾಡುವುದು ಮಾಡುತ್ತಿದ್ದರು. ನನ್ನ ಮೈದುನ ನನಗೆ ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು. ನನಗೆ ಕೊಡುತ್ತಿರುವ ಹಿಂಸೆಯ ಬಗ್ಗೆ 2-3 ಸಲ ನಮ್ಮ ಜಮಾತ್ ನಲ್ಲಿ ಪಂಚಾಯ್ತಿ ಆಗಿರುತ್ತದೆ. ಆದರೆ ನನ್ನ ಗಂಡ ಮತ್ತು ಅವರ ಮನೆಯವರು ಸುಧಾರಿಸಿರುವುದಿಲ್ಲ. 2020 ರಲ್ಲಿ ನಾನು ಎರಡನೇ ಸಲ ಗರ್ಭಿಣಿಯಾದಾಗ ನನಗೆ ಗರ್ಭಪಾತ ಮಾಡಲು ಅವರು ಹಿಂಸೆ ನೀಡಿರುತ್ತೇನೆ. ನನ್ನ ಗರ್ಭಪಾತ ಮಾಡಿಸಲು ಸುಶಿಲ್ಪಿ ಆಸ್ಪತ್ರೆಗೆ ಅವರು ಕರೆದುಕೊಂಡು ಹೋಗಿದ್ದರು, ಆದರೆ ವೈದ್ಯರು ಅದಕ್ಕೆ ಒಪ್ಪಿರುವುದಿಲ್ಲ. ಆ ದಿನ ಮರಳಿ ಮನೆಗೆ ಬಂದಾಗ ನನಗೆ ಹೊಡೆಬಡೆ ಮಾಡಿ ಊಟವನ್ನು ಸಹ ನೀಡಿರುವುದಿಲ್ಲ. ಅದೇ ದಿನ ಫೈರೋಜ ಎನ್ನುವವರಿಗೆ ಕರೆದು ನನ್ನ ಗಂಡನಿಗೆ ಬೇರೆ ವಿವಾಹ ಸಂಬಂಧ ನೋಡಲು ಹೇಳಲಾಗಿತ್ತು. ಫೈರೋಜರವರು ಸಹ ನನಗೆ ಸುಂದರವಾಗಿರುವ ಹುಡಗಿಯನ್ನು ನೋಡಿ ನಿನ್ನ ಗಂಡನ ವಿವಾಹ ಮಾಡುತ್ತೇನೆ ಆಗ ನಿನ್ನ ಗಂಡ ನಿನಗೆ ಚಪ್ಪಲಿಯಂತೆ ಮತ್ತು ಆಕೆಯನ್ನು ರಾಣಿಯಂತೆ ಇಡುತ್ತಾನೆ ನೋಡು ಎಂದು ಹೇಳಿ ಹೋಗಿರುತ್ತಾಳೆ.

ದಿಃ **05-05-2020** ರಂದು ನನ್ನ ಗಂಡ, ಅತ್ತೆ, ನಾದಿನಿ ಮತ್ತು ಮೈದುನ ಮನೆಗೆ ಬಂದು ನನಗೆ ಹೊಡೆಬಡೆ ಮಾಡಿ ನನ್ನ ಮಾಂಗಲ್ಯ ಸರ ಕಿತ್ತು ನನ್ನನ್ನು ಮತ್ತು ನನ್ನ ಮಗಳನ್ನು ಮನೆಯಿಂದ ಹೊರ ಹಾಕಿರುತ್ತಾರೆ. ನಾನು ಅಲ್ಲಿಂದ ನಮ್ಮ ತಂದೆಯ ಮನೆಗೆ ಹೋಗಿ ಎಲ್ಲಾ ವಿಚಾರ ತಿಳಿಸಿರುತ್ತೇನೆ. ನಂತರ ನಾವು ಪೊಲೀಸ್ ಠಾಣೆಗೆ ದೂರು ನೀಡಲು ಹೋಗಿರುತ್ತೇವೆ. ಆದರೆ ಅವರು ಮಾರನೆ ದಿನ ಬರಲು ತಿಳಿಸಿರುತ್ತಾರೆ. ಪೊಲೀಸರು ನಮ್ಮ ಮಧ್ಯ ರಾಜಿ

ಮಾಡಲು ತಿಳಿಸಿರುತ್ತಾರೆ ಆದರೆ ನನ್ನ ಗಂಡನ ಮನೆಯವರು ಒಪ್ಪಿರುವುದಿಲ್ಲ. ನನ್ನ ಗಂಡನ ಮನೆಯವರು ನಾನು ಮನೆಯಲ್ಲಿ ಕಳ್ಳತನ ಮಾಡುತ್ತಿದ್ದೆ ಎಂದು ನನ್ನ ಮೇಲ ಆಪಾದನೆ ಮಾಡಿರುತ್ತಾರೆ. ಒಂದು ತಿಂಗಳವರೆಗೆ ಅವರು ರಾಜಿ ಮಾಡಿಕೊಳ್ಳಬಹುದು ಎಂದ ಕಾದಿರುತ್ತೇನೆ ಆದರೆ ಅವರು ಬಂದಿರುವುದಿಲ್ಲ. ಆ ಕಾರಣ ದಿಃ **07-06-2020** ರಂದು ಅವರ ವಿರುದ್ಧ ನಾನು ದೂರು ನೀಡಿರುತ್ತೇನೆ. ಸದರಿ ಪ್ರಕರಣ ಸಂಖ್ಯೆ **524/2020** ಎಂದು ಇತ್ಯರ್ಥ ಹಂತದಲ್ಲಿ ಇರುತ್ತದೆ.

ನನ್ನ ಗಂಡ ಬಿಜಿನೆಸ್ ಮ್ಯಾನ್ ಆಗಿರುತ್ತಾರೆ. ಅವರು ನ್ಯಾಷನಲ್ ಟೈಲ್ಸ್ ನ ಪ್ರೊಪರೈಟರ್ ಆಗಿರುತ್ತಾರೆ. ಅದರ ಜೊತೆಯಲ್ಲಿ ಅವರು ಸ್ಯಾನಿಟರಿ ವೇರ್ ಪ್ರಾಡಕ್ಟ್ ಗಳನ್ನು ಮಾರುತ್ತಾರೆ ಮತ್ತು ದೊಡ್ಡ ಶೋರೂಂ ನ್ನು ಸಹ ಹೊಂದಿರುತ್ತಾರೆ. ಅದರ ಜೊತೆಯಲ್ಲಿ ನನ್ನ ಗಂಡ ಕಂಪ್ಯೂಟರ್ ಗ್ಯಾಲೆಕ್ಸಿ ಕಂಪೆನಿಯ ಪ್ರೊಪರೈಟರ್ ಸಹ ಇರುತ್ತಾರೆ. ಅದರ ಅಡಿಯಲ್ಲಿ ಕಂಪ್ಯೂಟರ್ ಸೇಲ್ಸ ಅಂಡ್ ಸರ್ವೀಸಸ್, ಸಿಸಿ ಟಿ.ವಿ ಸಲ್ಯೂಷನ್ ಮತ್ತು ಟ್ರೆನಿಂಗ್ ನಡೆಸುತ್ತಾರೆ. ಅವರು ಕಂಪ್ಯೂಟರ್ ಕ್ಲಾಸ್, ಸ್ಪೋಕನ್ ಇಂಗ್ಲೀಷ್ ಕ್ಲಾಸ್ ಸಹ ನಡೆಸುತ್ತಾರೆ. ಅದೇ ರೀತಿ ಡೆಲ್ ಕಂಪೆನಿಯ ಡೀಲರ್ ಶಿಪ್ ನ್ನು ಹೊಂದಿರುತ್ತಾರೆ. ಅದೇ ರೀತಿ ನನ್ನ ಗಂಡ ಕ್ಯೂಮೇ ಸಾಫ್ಟ್ ವೇರ್ ಸಲೂಷನ್ ಪ್ರೈ.ಲಿ ಎಂಬ ಕಂಪೆನಿಯನ್ನು ಹೊಂದಿದ್ದಾರೆ. ಅದರಲ್ಲಿ ನನ್ನ ಅತ್ತೆ, ನನ್ನ ಗಂಡ, ನನ್ನ ಮೈದುನ ಡೈರೆಕ್ಟರ್ ಆಗಿರುತ್ತಾರೆ. ಸದರಿ ಕಂಪೆನಿಯ ಅಡಿಯಲ್ಲಿ ಸಾಫ್ಟ್ ವೇರ್ ತಯಾರಿಸಿ ಮಾರಾಟ ಮಾಡುತ್ತಾರೆ. ಅದೇ ರೀತಿ ನನ್ನ ಗಂಡನ ಕುಟುಂಬದವರು ಕಂಪ್ಯೂಗಲ್ ಅಕಾಡೆಮಿ ಎಲ್.ಎಲ್.ಪಿ ಟ್ರೈನಿಂಗ್ ಸ್ಕೂಲ್ ಸಹ ನಡೆಸುತ್ತಾರೆ. ಅದರ ಅಡಿಯಲ್ಲಿ ಶಾಲೆಗಳಿಗೆ, ಕಾಲೇಜ್ ಗಳಿಗೆ ಹೋಗಿ ಕಂಪ್ಯೂಟರ್ ಬಗ್ಗೆ ತರಬೇತಿ ನೀಡುತ್ತಾರೆ. ಈ ಎಲ್ಲಾ ಬಿಜಿನೆಸ್ ಗಳ ಮಾಲೀಕತ್ವ ನನ್ನ ಗಂಡ ವಹಿಸಿರುತ್ತಾರೆ. ಅವರಿಗೆ ಎಲ್ಲಾ ವ್ಯಾಪಾರದಿಂದ ತಿಂಗಳಿಗೆ ರೂ. **8** ರಿಂದ **9** ಲಕ್ಷ ಆದಾಯ ಇರುತ್ತದೆ.

ಈಗ ನನಗೆ ಇಬ್ಬರು ಮಕ್ಕಳು ಇರುತ್ತಾರೆ. ನನ್ನ ಮಗಳ ಹೆಸರು ನಾಯ್ರಾಯ ಅವಳು **5** ವರ್ಷದವಳು ಇರುತ್ತಾಳೆ, ಇನ್ನೊಬ್ಬ ಮಗನ ಹೆಸರು ಅಜೀಮುದ್ದೀನ್ ಅಲಿಷ, ಅವನ ವಯಸ್ಸು **3** ವರ್ಷ ಇರುತ್ತದೆ. ನನ್ನ ಮಕ್ಕಳ ಜವಾಬ್ದಾರಿ ನನ್ನ ಮೇಲೆ ಇದೆ. ನನ್ನ ತಂದೆ

ಕುಟುಂಬದವರು ನಮ್ಮನ್ನು ಈಗ ನೋಡಿಕೊಳ್ಳುತಿದ್ದಾರೆ. ನನ್ನ ತಂದೆಯ ಪಿಂಚಣಿಯಲ್ಲಿ ನಮ್ಮ ಜೀವನ ತುಂಬಾ ತೊಂದರೆಯಿಂದ ನಡೆಯುತ್ತಿದೆ. ನನ್ನ ಮಗಳು ಎಲ್.ಕೆ.ಜಿ ಓದುತ್ತಾಳೆ ವಾರ್ಷಿಕ ರೂ. 20 ಸಾವಿರ ಖರ್ಚು ಆಗುತ್ತದೆ, ಅದನ್ನು ಸಹ ನಾವೇ ಕೊಟ್ಟಿರುತ್ತೇವೆ. ನನ್ನ ಮಗನನ್ನು ಸಹ ಶಾಲೆಗೆ ಸೇರಿಸಬೇಕು ಅದರ ಖರ್ಚು ಸಹ ಇರುತ್ತದೆ. ನನ್ನ ಮಕ್ಕಳ ಆಹಾರ, ವೈದ್ಯಕೀಯ ಮತ್ತು ಶೈಕ್ಷಣಿಕ ಖರ್ಚು ನನ್ನ ತಂದೆ ನೋಡಿಕೊಳ್ಳುತಿದ್ದಾರೆ. ಅಕ್ಟೋಬರ್ ನಲ್ಲಿ ನನ್ನ ಇಬ್ಬರು ಮಕ್ಕಳಿಗೆ ಡೆಂಗ್ಯೂ ಜ್ವರ ಬಂದಿರುತ್ತದೆ. ಅದಕ್ಕೆ ರೂ. 20 ರಿಂದ 40 ಸಾವಿರ ಖರ್ಚು ಬಂದಿರುತ್ತದೆ ಅದನ್ನು ನಾವು ಬೇರೆಯವರಿಂದ ಸಾಲ ಪಡೆದುಕೊಂಡು ತೀರಿಸಿರುತ್ತೇವೆ.

ನನ್ನ ಎರಡು ಹೆರಿಗೆಯ ಖರ್ಚನ್ನು ನನ್ನ ತಂದೆಯವರು ನೋಡಿಕೊಂಡಿರುತ್ತಾರೆ. ನನ್ನ ಗಂಡ ಆರ್ಥಿಕವಾಗಿ ಸುಸ್ಥಿತಿಯಲ್ಲಿ ಇದ್ದು ನನಗೆ ಮತ್ತು ನನ್ನ ಮಕ್ಕಳಿಗೆ ರೂ 45 ಸಾವಿರಗಳನ್ನು ಜೀವನಾಂಶವಾಗಿ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

(ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ದಾಖಲಾತಿಗಳ ಗುರುತಿಗಾಗಿ ಸಮಯಾವಕಾಶವನ್ನು ಕೇಳಿದ್ದು ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಲಯ
ಮತ್ತು ಪ್ರ. ದ. ನ್ಯಾ. ದಂ.ಗಳು,
ಹೊಸಪೇಟೆ.